# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 230(49) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖಾ ವ್ಯಾಪ್ತಿಗೆ ಬರುವ ಕೆ.ಐ.ಎ.ಡಿ.ಬಿ. ವತಿಯಿಂದ ಕಾನ್ ಕಾರ್ಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ಸಾದರಮಂಗಲ (ವೈಟ್ ಫೀಲ್ಡ್) ಪ್ರದೇಶದ ಭೂ ಮಂಜೂರಾತಿಯಲ್ಲಿ ಆಗಿರುವ ಅಕ್ರಮಗಳ ಕುರಿತು ಅಧಿವೇಶನದಲ್ಲಿ ಸೂಕ್ತ ತನಿಖೆ ಆದೇಶ ನೀಡಲಾಗುವುದು ಎಂದು ಭರವಸೆ ನೀಡಿದ್ದು ಈ ಅಕ್ರಮಗಳ ಕುರಿತು ತನಿಖೆ ಮಾಡಲಾಗಿದೆಯೇ:<br>ಮಾಡಿದ್ದಲ್ಲಿ ತಪ್ಪಿಸ್ಥರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಮತ್ತು ತನಿಖಾ ವರದಿ ಸದನದ ಮುಂದೆ ಮಂಡಿಸಲಾಗಿದೆಯೇ ; | ಮಂಡಳಿಯು M/s Concord India Pvt Ltd ರವರಿಗೆ ಬೆಂಗಳೂರು ಜಿಲ್ಲೆಯ ಕಾಡುಗೋಡಿ ಕೈಗಾರಿಕಾ ಪ್ರದೇಶದಲ್ಲಿನ ಸರ್ವೆ ನಂ.1 ಬ್ಲಾಕ್ ನಂ.73 ನಿವೇಶನ ಸಂಖ್ಯೆ : 6 ರಲ್ಲಿ 78 ಎಕರೆ 2219 ಚ.ಮೀ ಜಮೀನನ್ನು ಹಂಚಿಕೆ ಮಾಡಿರುತ್ತದೆ.<br><br>ಮಂಡಳಿಯು M/s Concord India Pvt Ltd ರವರಿಗೆ ಪ್ರತಿ ಎಕರೆಗೆ ರೂ.50,00,000/- ದರದಂತೆ ದಿನಾಂಕ:07.06.2007 ರಂದು 11 ವರ್ಷಗಳ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ.<br><br>M/s Concord India Pvt Ltd ಸಂಸ್ಥೆಯ ಹೆಸರನ್ನು ಕಂಪನಿಯು ದಿನಾಂಕ : 22.10.2020 ರಂದು M/s Embassy East Business Park Pvt Ltd ಸಂಸ್ಥೆಗಾಗಿ Registrar of Companies ನಲ್ಲಿ ಬದಲಾವಣೆ ಮಾಡಿಕೊಂಡಿರುತ್ತಾರೆ. ತದನಂತರ ಸದರಿ ಕಂಪನಿಯು ಮಂಡಳಿಗೆ ದಿನಾಂಕ : 09.11.2020 ರ ತಮ್ಮ ಮನವಿಯ ಮೂಲಕ ಮಂಡಳಿಯ ಗಮನಕ್ಕೆ ತಂದು ಹೆಸರು ಬದಲಾವಣೆಗೆ ಅನುಮತಿ ಕೋರಿರುತ್ತಾರೆ.<br><br>ಮಂಡಳಿಯಲ್ಲಿರುವ, ಹಾಲಿ ಹಕ್ಕು ವರ್ಗಾವಣೆ ನೀತಿಯನ್ವಯ ಹಂಚಿಕೆದಾರರು ಸಂವಿಧಾನ ಬದಲಾವಣೆ ಮಾಡಿಕೊಳ್ಳಲು ಅವಕಾಶವಿದ್ದು, ಸದರಿ ಪ್ರಸ್ತಾವನೆ ಯನ್ನು ಮಂಡಳಿಯಲ್ಲಿ ಪರಿಶೀಲಿಸಿ, ದಿನಾಂಕ : 09.07.2021 ರಂದು M/s Concord India Pvt Ltd., ಕಂಪನಿಯ ಮೂಲ ಷೇರುದಾರರು M/s Embassy East Business Park Pvt Ltd ಕಂಪನಿಯಲ್ಲಿ ಕನಿಷ್ಟ ಶೇ.51 ಷೇರನ್ನು ಹೊಂದಿರ ಬೇಕೆಂದು ಷರತ್ತನ್ನು ವಿಧಿಸಿ ಹಾಗೂ ದಿನಾಂಕ : 07.06.2007 ರಂದು ನೆರವೇರಿಸಿರುವ ಗುತ್ತಿಗೆ ಕರಾರಿನ ಷರತ್ತುಗಳು ಮುಂದುವರೆಯುವ ಷರತ್ತಿಗೊಳಪಟ್ಟು ಹೆಸರು ಬದಲಾವಣೆಗೆ ಅನುಮೋದನೆ ನೀಡಲಾಗಿದೆ. |
| ಆ | ತನಿಖೆ ಕೈಗೊಳ್ಳದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ಮತ್ತು ಭೂ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ ಸಿಬ್ಬಂದಿ ವರ್ಗದವರ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು? | |

| | | |
|---|---|---|
| | | ಈ ಹಿನ್ನೆಲೆಯಲ್ಲಿ M/s Concord India Pvt Ltd ತನ್ನ ಹೆಸರನು M/s Embassy East Business Park Pvt Ltd., ಗೆ ಹೆಸರು ಬದಲಾವಣೆಗೆ ಅನುಮತಿಯನ್ನು ಮಂಡಳಿಯಲ್ಲಿ ಹಾಲಿ ಇರುವ ಸಂವಿಧಾನ ಬದಲಾವಣೆಯ ನೀತಿಯಂತೆ ನೀಡಲಾಗಿದೆ. |

**ಸಂಖ್ಯೆ: ಸಿಐ 50 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**